ಸಾಕ್ಷಿಗೆ ದಿನಾಂಕ 05-12-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

ಮುಂದುವರೆದ ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ-

ಚಾಸಾ-5 ನನಗೆ ಮಾವನಾಗಬೇಕು, ಚಾಸಾ-6 ರವರು ಸಹಾ ನನಗೆ ಮಾವನಾಗಬೇಕು. ಚಾಸಾ-7 ನನಗೆ ಅಳಿಯನಾಗಬೇಕು. ಚಾಸಾ-4 ನನ್ನ ಹೆಂಡತಿ ಇರುತ್ತಾರೆ. ಗಲಾಟೆಯಾದ ವರ್ಷ, ತಿಂಗಳು, ಸಮಯ, ದಿನ ನನಗೆ ನೆನಪಿಲ್ಲ. ಪೋಲೀಸ್ ಠಾಣೆಗೆ ನಾನು ುತ್ತು ಚಾಸಾ-4 ರವರು ಹೋಗಿರುತ್ತೇವೆ. ನಮ್ಮನ್ನು ಹೊರತುಪಡಿಸಿ ಆ ದಿನ ಪೋಲೀಸ್ ಠಾಣೆಗೆ ನಮ್ಮ ಜೊತೆ ಬೇರೆ ಯಾರೂ ಬಂದಿರುವುದಿಲ್ಲ. ನಾವು ಮೊದಲು ಆ ದಿನ ಆಸ್ಪತ್ರೆಗೆ ಹೋದೆವು ನಂತರದಲ್ಲಿ ಪೋಲೀಸ್ ಠಾಣೆಗೆ ಹೋದೆವು. ಆ ದಿನ ರಾತ್ರಿ 10 ಗಂಟೆ ಸಮಯಕ್ಕೆ ನಾವು ಆಸ್ಪತ್ರೆಗೆ ಹೋಗಿರುತ್ತೇವೆ. ಯಾವ ದಿನಾಂಕದಂದು ನಾವು ಆಸ್ಪತ್ರೆಗೆ ಹೋಗಿರುತ್ತೇವಂತಾ ನನಗೆ ಹೇಳಲು ಬರುವುದಿಲ್ಲ. ಪೋಲೀಸ್ ಠಾಣೆಗೆ ದೂರು ನೀಡಲು ಯಾವ ದಿನಾಂಕದಂದು ಯಾವ ಸಮಯಕ್ಕೆ ಹೋಗಿರುತ್ತೇವಂತಾ ನನಗೆ ಹೇಳಲು ಬರುವುದಿಲ್ಲ. ನನಗೂ ಮತ್ತು ಆರೋಪಿತರಿಗೂ ಸರ್ವೆ ನಂ. 392 ರಲ್ಲಿ ಹಿಸ್ಸೆ ಇರುತ್ತದೆ ನಮಗೆ ಅದರಲ್ಲಿ 3 ಎಕರೆ ಹಿಸ್ಸೆ ಇದೆ, ಆರೋಪಿತರಿಗೆ 2 ಎಕರೆ ಹಿಸ್ಸೆ ಇದೆ. ಸದರಿ ಸರ್ವೆ ನಂಬರ್ ನಮ್ಮ ತಾಯಿಯ ಹೆಸರಿನಲ್ಲಿದೆ. ನಮ್ಮ ಮತ್ತು ಆರೋಪಿತರ ನಡುವೆ ಮೇಲ್ಕಾಣಿಸಿದ ಜಮೀನು ಕುರಿತು ಗಲಾಟೆಯಾಗುತ್ತಲೇ ಇರುತ್ತದೆ. ಗಲಾಟೆಯಾದ ಸಮಯದಲ್ಲಿ ನಾನು ಮಾತ್ರ ಇದ್ದೆ. ಆ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಜಮೀನು ಕುರಿತು ವ್ಯಾಜ್ಯ ಇರುವುದರಿಂದ ನಾನು ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಪಂಚನಾಮೆಯನ್ನು ಪೋಲೀಸರು ಠಾಣೆಯಲ್ಲಿ ಬರೆದಿರುತ್ತಾರೆ. ಪಂಚನಾಮೆಯನ್ನು ನಾವೇ ಬರೆಸಿರುತ್ತೇವೆ. ನ್ಯಾಯಾಲಯದ ಮುಂದಿರುವ ಮು ಮಾ-1 ನ್ನು ಪೋಲೀಸರು ಜಮೀನಿನಿಂದ ತೆಗೆದುಕೊಂಡು ಬಂದಿರುತ್ತಾರೆ. ಪಂಚನಾಮೆಯ ವಿಚಾರನ್ನು ನಾನು ಏನೂ ಹೇಳಿ ಬರೆಸಿರುವುದಿಲ್ಲ. ನಮ್ಮ ಮತ್ತು ಆರೋಪಿತರ ನಡುವೆ ನಾನು ಹೇಳುವ ಹಾಗೆ ಯಾವುದೇ ಗಲಾಟೆಯಾಗಿಲ್ಲ ಅವರು ನನಗೆ ಮತ್ತು ನನ್ನ ಹೆಂಡತಿಗೆ ಯಾವುದೇ ರೀತಿಯಿಂದ ಹೊಡೆಬಡಿ ಮಾಡಿಲ್ಲ, ರಕ್ತಗಾಯಪಡಿಸಿಲ್ಲ, ಅವಾಚ್ಯವಾಗಿ ಬೈದಿಲ್ಲ ಮತ್ತು ಜೀವಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಜಮೀನು ಕುರಿತು ತಂಟೆ ಇರುವುದರಿಂದ

C.W.: 1 P.W.: 1

ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ